ಅಧ್ಯಕ್ಷರು:- ಅವರು ಯಾವ ಭಾಷೆಯನ್ನು ಮಾತನಾಡುತ್ತಾರೆ.

ಶ್ರೀ ಬಿ.ಮುನಿಯಪ್ಪ:- ಅವರು ಉತ್ತರ ಇಂಡಿಯಾದ ಭಾಷೆಯನ್ನು ಮಾತನಾಡುತ್ತಾರೆ. ರೈಲ್ವೆ ಅಧಿಕಾರಿಗಳು ಒಂದು ಮ್ಯಾಪನ್ನು ಬರೆದು ಇಟ್ಟುಕೊಂಡಿದ್ದಾರೆ. ಆ ಮ್ಯಾಪ್ ಸುಮಾರು 40 ವರ್ಷದ ಹಿಂದಿನ ಮ್ಯಾಪ್. ಬೆಂಗಳೂರಿನಲ್ಲಿ ಅರ್ಧಭಾಗ ರೈಲ್ವೆ ಇಲಾಖೆಗೆ ಸೇರಿದ್ದುದು ಎಂದು ತಿಳಿದುಕೊಂಡಿದ್ದಾರೆ. ತಮ್ಮ ಮೂಲಕ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅದರಲ್ಲಿ ನಮ್ಮ ಮಹಾ ನಗರಪಾಲಿಕೆಗೆ ಸೇರಿದ, ಸರ್ಕಾರಕ್ಕೆ ಸೇರಿದ ಸ್ಥಳಗಳಿವೆ. ಇದು ಪರಿಹಾರ ಆಗಬೇಕಾದರೆ ಮಹಾ ನಗರಪಾಲಿಕೆಯ ಮುಖಾಂತರ, ಸರ್ಕಾರದ ಮುಖಾಂತರ ಅಲ್ಲಿರತಕ್ಕ ಜಾಗ ಸರ್ಕಾರದ್ದು ಯಾವುದು, ಮಹಾ ನಗರ ಪಾಲಿಕೆಯದು ಯಾವುದು, ರೈಲ್ವೆ ಇಲಾಖೆಯದು ಯಾವುದು ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿಕೊಂಡು ಚರ್ಚೆಮಾಡಿ ಇತ್ಯರ್ಥ ಮಾಡಬೇಕು. ರೈಲ್ವೆ ಅಧಿಕಾರಿಗಳು ಮನಸ್ಸಿಗೆ ಬಂದಂತೆ ಧಾಳಿ ಮಾಡುವಂಥ ಪರಿಪಾಠ ಇದೆ. ಇದರಿಂದ ಬಹಳ ತೊಂದರೆಯಾಗುತ್ತಿರುವುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಇದನ್ನು ಮೊದಲು ಇತ್ಯರ್ಥ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಶಾಸಕರನ್ನು, ಸಂಬಂಧಪಟ್ಟ ಅಧಿಕಾರಿಗಳನ್ನು, ಮಹಾ ನಗರಪಾಲಿಕೆಯವರನ್ನು, ರೈಲ್ವೆ ಅಧಿಕಾರಿಗಳನ್ನು ನನ್ನ ಕೊಠಡಿಗೆ ಬರಮಾಡಿಕೊಂಡು ಚರ್ಚೆಮಾಡಿ ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇನೆ.

(2) ಚಿಂಚೋಳಿ ತಾಲ್ಲೂಕಿನಲ್ಲಿ ಹೆಣ್ಣುಮಕ್ಕಳ ಮೇಲೆ ಹಾಗೂ ಗಂಗಾವತಿಯಲ್ಲಿ ಕೃಷಿ ಕಾರ್ಮಿಕರ ಮೇಲೆ ದೌರ್ಜನ್ಯ

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ನಡೆದಿರುವಂಥ ಎರಡು ಪ್ರಮುಖ ಘಟನೆಗಳ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. ಮೊದಲನೆಯದು ತಾ: 18-8-95 ರಂದು ಮಧ್ಯಾಹ್ನ ಸುಮಾರು 12 ಗಂಟೆ ಸಮಯದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಚಿಂಚೋಳಿ ತಾಲ್ಲೂಕಿನ ಸಾಲೆ ಬೀರನಹಳ್ಳಿಯ ಸರ್ವೆ ನಂ.37ರಲ್ಲಿ ಸುಮಾರು 25 ವರ್ಷಗಳಿಂದ ಜಮೀನನ್ನು ಸಾಗುವಳಿ ಮಾಡುತ್ತಿದ್ದ ಲಂಬಾಣಿ ಕುಟುಂಬಗಳ ಮೇಲೆ ಅರಣ್ಯ ಇಲಾಖೆಯ ಅಧಿಕಾರಿಗಳು ಹೋಗಿ ನಿರ್ದಾಕ್ಷಿಣ್ಯವಾಗಿ ದೌರ್ಜನ್ಯ ನಡೆಸಿ ಅವರ ಗುಡಿಸಲುಗಳನ್ನು ಕಿತ್ತುಹಾಕಿ, ಅವರ ಹೆಂಗಸರುಗಳನ್ನು ಹೊರಗೆ ಎಳೆದು ನಿರ್ದಯದಿಂದ ಒದ್ದಿರುವುದು ಅಷ್ಟೇ ಅಲ್ಲದೆ ಹೇಮಲಾ ಬಾಯಿ ಮತ್ತು ಸಮಕಿ ಬಾಯಿ ಎಂಬ ಇಬ್ಬರು ಹೆಣ್ಣು ಮಕ್ಕಳ ಗುಪ್ತಾಂಗದ ಮೇಲೆ ಒದ್ದಿದ್ದಾರೆ. ಅದಾದನಂತರ ಆ ಗುಡಿಸಲುಗಳಲ್ಲಿದ್ದ ಎಲ್ಲಾ ಗಂಡಸರನ್ನು ಹೊರಗೆಳೆದು ಗುಡಿಸಲುಗಳನ್ನು ಕೆಡವಿಹಾಕಿ ಆ ಜಾಗದಿಂದ ಅವರನ್ನು ಖಾಲಿ ಮಾಡಿಸಿದ್ದಾಲೆ. ಇದರ ಬಗ್ಗೆ ಅವರು ಪ್ರತಿಭಟನೆ ಮಾಡಿ ಪೋಲೀಸ್‌ಸ್ಟೇಷನ್‌ಗೆ ದೂರು ಕೊಟ್ಟಿದ್ದಾರೆ. ಈ ಇಡೀ ದೌರ್ಜನ್ಯದ ನಾಯಕತ್ವವನ್ನು ವಹಿಸಿದ್ದಂಥ ಅಲ್ಲಿಯ ವಲಯದ ಅರಣ್ಯ ಅಧಿಕಾರಿ ಶ್ರೀಮತಿ ರೀಟಾ ಠಕ್ಕರ್ ಎನ್ನುವವರು ಕೇವಲ ಅರಣ್ಯಾಧಿಕಾರಿಗಳನ್ನು ಮಾತ್ರವಲ್ಲದೆ ಸುಮಾರು 20-30 ಜನ ಗೂಂಡಾಗಳನ್ನೂ ಕೂಡ ಅಲ್ಲಿಗೆ ಕರೆದುಕೊಂಡು ಹೋಗಿ ದೌರ್ಜನ್ಯ ನಡೆಸಿದ್ದಾರೆ. ಇದರ ವಿರುದ್ಧ ಪೋಲೀಸ್ ಸ್ಟೇಷನ್‌ನಲ್ಲಿ ದೂರು ಕೊಟ್ಟಾಗ ಆ ಕೇಸು ರಿಜಿಸ್ಟರ್ ಆಗಿದೆ. ಆದರೆ ಮುಂದೆ ಏನೂ ಕ್ರಮವನ್ನು

ತೆಗೆದುಕೊಂಡಿಲ್ಲ. ವಲಯ ಅರಣ್ಯಾಧಿಕಾರಿ ಶ್ರೀಮತಿ ರೀಟಾ ಠಕ್ಕರ್‌ರವರ ವಿರುದ್ಧ ದೂರು ಕೊಟ್ಟರೆ ಆ ಕೇಸನ್ನು ರಿಜಿಸ್ಟರ್ ಮಾಡಿಲ್ಲ. ಆ ಅಧಿಕಾರಿಯನ್ನು ಅಮಾನತ್ತುಗೊಳಿಸಬೇಕೆಂದು ಹೇಳಿದರೂ ಕೂಡ ಅದರ ಬಗ್ಗೆ ಯಾರೂ ಕೂಡ ಗಮನವನ್ನು ಹರಿಸಿಲ್ಲ. ಅವರು ಏನು ಮಾತ ಮಾದುತ್ತಾರೆಂದರೆ ಇದು ಅರಣ್ಯ ಭೂಮಿ ಎಂದು.

ಅಧ್ಯಕ್ಷರು:- ಇದರ ಬಗ್ಗೆ ಭಾಷಣ ಮಾಡುವುದು ಬೇಡ. ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ವಿಚಾರವನ್ನು ತಂದರೆ ಸಾಕು.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ:- ಇದು ಅರಣ್ಯಭೂಮಿ ಎಂಬ ವಾದವನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು:- ಅದು ಏನೇ ಇರಲಿ. ಅವರು ಅಟ್ರಾಸಿಟೀಸ್ ಮಾಡಿದ್ದಾರೆ. Be brief. You have already brought it to the notice of the Hon. Minister.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:-ಇನ್ನೊಂದು ಘಟನೆ ಇದೆ.

11.50 ಎ.ಎಂ.

ಅಧ್ಯಕ್ಷರು:- ನೀವು ಶೂನ್ಯ ವೇಳೆಯಲ್ಲಿ ಈ ರೀತಿ ಬದಲಾಯಿಸಿದ್ದರೆ ಶೂನ್ಯ ವೇಳೆಯನ್ನು ಸಸ್ಪೆಂಡ್ ಮಾಡಬೇಕಾಗುತ್ತದೆ. ಹೆಚ್ಚಾಯಿತು ವೇಳೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಶೂನ್ಯ ವೇಳೆಯಲ್ಲಿ ಇನ್ನು ಏನು ಪ್ರಶ್ನೆಯನ್ನು ಎತ್ತಬೇಕು ಹೇಳಿ, ಇನ್ನೊಂದು ಘಟನೆ ರಾಯಚೂರು ಜಿಲ್ಲೆ ಗಂಗಾವತಿಯಲ್ಲಿ ದಿನಾಂಕ 1-9-95 ರಂದು ಕೃಷಿ ಕಾರ್ಮಿಕರಾಗಿರತಕ್ಕಂತಹ ಹರಿಜನರ ಮೇಲೆ ಭೂ ಮಾಲೀಕರು ದೌರ್ಜನ್ಯವನ್ನು ನಡೆಸಿದ್ದಾರೆ. ಹೊಡೆದು ಅವರ ಕೈ ಕಾಲುಗಳನ್ನು ಮುರಿದು, ಕಂಪ್ಲೇಂಟ್ ಕೊಟ್ಟಿದ್ದಾರೆ. ಆದರೆ ಇದುವರೆಗೂ ತಪ್ಪಿತಸ್ಥರನ್ನು ಅರೆಸ್ಟ್ ಮಾಡಿಲ್ಲ. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ, ಚಿಂಚೋಳಿ ತಾಲ್ಲೂಕಿನ ಸಾಲೇಬೀರನಳ್ಳಿಯಲ್ಲಿ ಆ ಲಂಬಾಣಿ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಡೆಸಿದಂತಹ ವಲಯ ಅರಣ್ಯ ಅಧಿಕಾರಿಗಳನ್ನು ತಕ್ಷಣ ಅಮಾನತ್ತುಗೊಳಿಸಬೇಕು ಮತ್ತು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತು ರಾಯಚೂರು ಜಿಲ್ಲೆಯ ಗಂಗಾವತಿಯಲ್ಲಿ ಹರಿಜನ ಕೃಷಿ ಕಾರ್ಮಿಕರ ಮೇಲೆ ದೌರ್ಜನ್ಯ ನಡೆಸಿದಂತಹ ಕೇಸ್ ದಾಖಲಾಗಿದೆ. ಇದುವರೆಗೆ ಅವರನ್ನು ಬಂಧಿಸಿಲ್ಲ. ಅವರನ್ನು ಅರೆಸ್ಟ್ ಮಾಡಬೇಕು. ಅದರ ಬಗ್ಗೆ ಸರ್ಕಾರ ಏನು ಉತ್ತರವನ್ನು ಹೇಳುತ್ತದೆಂದು ಕೇಳುತ್ತಿದ್ದೇನೆ.

ಶ್ರೀ ಎಚ್.ವೈ.ಮೇಟಿ (ಅರಣ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಈ ಚಿಂಚೋಳಿ ವಿಷಯದ ಬಗ್ಗೆ.....

ಅಧ್ಯಕ್ಷರು:- ಚಿಂಚೊಣಿ ವಿಷಯ ನಿಮಗೆ ಬರುವುದಿಲ್ಲ, ಶ್ರೀ ಪಿ.ಜಿ.ಆರ್.ಸಿಂಧ್ಯರವರಿಗೆ ಬರುತ್ತದೆ, ಅದನ್ನು ಅವರು ಹೇಳುತ್ತಾರೆ.

ಶ್ರೀ ಎಚ್.ವೈ.ಮೇಟಿ:- ಗುಲ್ಬರ್ಗಾ ಅರಣ್ಯ ಇಲಾಖೆಯ ಬಗ್ಗೆ ನಾನು ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ನಾಳೆ ಏಕೆ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು):- ಮಾನ್ಯ ಅಧ್ಯಕ್ಷರೇ, ಚಿಂಚೋಳಿ ವಿಷಯದಲ್ಲಿ

ಗಂಗಾವತಿ ವಿಚಾರದಲ್ಲಿ ಎರಡು ವಿಚಾರದಲ್ಲಿ, ಸರ್ಕಾರ ತೆಗೆದುಕೊಂಡಿರತಕ್ಕಂತಹ ಕ್ರಮಗಳನ್ನು ಈ ಸದನದ ಮುಂದೆ ಇಡುತ್ತಿದ್ದೇನೆ. ಚಿಂಚೋಳಿಯಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿರತಕ್ಕಂತಹ ವಿಚಾರದಲ್ಲಿ ಸ್ವಲ್ಪ ಸತ್ಯವಿದೆ. ನಾನು ವಲಯದ ಡಿ.ಐ.ಜಿ.ಯವರ ಜೊತೆಯಲ್ಲಿ ಮಾತನಾಡಿದ್ದೇನೆ. ಅಲ್ಲಿ ಡಿಸ್‌ಪ್ಯೂಟ್ ಇರುವುದು ಜಮೀನಿನ ಬಗ್ಗೆ. ರೆವಿನ್ಯೂ ಜಮೀನು, ಫಾರೆಸ್ಟ್ ಜಮೀನು, ಅದನ್ನು ಮಾಡುತ್ತಾ ಇರತಕ್ಕಂಥವರು ಯಾರು ಎನ್ನುವುದರ ಬಗ್ಗೆ. ಅದನ್ನು ಮಾಡುತ್ತಿರುವವರು ಲಂಬಾಣಿ ಜನಾಂಗದವರು. ಅರಣ್ಯ ಇಲಾಖೆಯವರು ಅವರನ್ನು ಹೋಗು ಎಂದು ಎಬ್ಬಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಎನ್ನತಕ್ಕಂತಹ ವಿಚಾರ. ಮತ್ತು ಲಂಬಾಣಿ ಜನಾಂಗದ ಕೆಲವು ಜನರ ಮೇಲೆ ಆಗಿರತಕ್ಕಂತಹ ದೌರ್ಜನ್ಯ ಬಗ್ಗೆಯೂ ಸಹ ಮಾನ್ಯ ಸದಸ್ಯರು ಇವತ್ತು ಪ್ರಸ್ತಾಪ ಮಾಡಿದ್ದಾರೆ. ಅವರು ಕಂಪ್ಲೆಂಟ್ ಕೊಟ್ಟಿರತಕ್ಕಂಥದ್ದು ಒಬ್ಬ ಡಿ.ಎಫ್.ಓ. ಹೆಣ್ಣು ಮಗಳೇ, ಆಕೆ ಅಲ್ಲಿದ್ದು ಅದನ್ನೆಲ್ಲ ಮಾಡಿದ್ದಾಳೆಂದು. ಆದ್ದರಿಂದ ಅರಣ್ಯ ಇಲಾಖೆ ಮತ್ತು ರೆವಿನ್ಯೂ ಇಲಾಖೆಯ ಅಧಿಕಾರಿಗಳು ಇಬ್ಬರು ತಪ್ಪಿತಸ್ಥರ ಸ್ಥಾನದಲ್ಲಿರುವುದರಿಂದಾಗಿ, ವಲಯದ ಡಿ.ಐ.ಜಿ.ಯವರ ಜೊತೆಯಲ್ಲಿ ನಾನೇ ಖುದ್ದಾಗಿ ಮಾತನಾಡಿ, ಅಲ್ಲಿಯ ಶಾಸಕರು ನಮ್ಮ ಸಹೋದ್ಯೋಗಿಯಾದಂತಹ ಶ್ರೀ ವೈಜನಾಥ ಪಾಟೀಲ್‌ರವರು ಈ ವಿಚಾರದಲ್ಲಿ ಒಂದು ವಾರದ ಹಿಂದೆಯೇ ಹೇಳಿದ್ದಾರೆ. ಈಗಾಗಲೇ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಂಡಿದೆ. ಇದರ ಬಗ್ಗೆ ವಿಚಾರಣೆ ನಡೆಸುತ್ತದೆ. ದೌರ್ಜನ್ಯವಾಗಿದೆ ಎನ್ನುವುದು ನಮಗೆ ಸ್ವಲ್ಪ ಮೇಲ್ನೋಟಕ್ಕೆ ಕಂಡರೂ ಸಹಿತ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂತಹ ಭರವಸೆಯನ್ನು ಕೊಡುವುದರ ಜೊತೆಗೆ ನ್ಯಾಯಯುತವಾಗಿ ಅದು ಏನಾಗಬೇಕೊ ಅದನ್ನು ಬಗೆಹರಿಸುತ್ತೇವೆ. ಇದು ಚಿಂಚೋಳಿಯ ವಿಚಾರದಲ್ಲಿ. ಇನ್ನು ಗಂಗಾವತಿಯ ವಿಚಾರದಲ್ಲಿ ಇರತಕ್ಕಂಥದ್ದು ಜಮೀನಿನ ವಿಚಾರದಲ್ಲಿ ಮತ್ತೊಂದು ಅಲ್ಲಿ ರೈಲ್ವೆ ಸ್ಟೇಷನ್ ಪಕ್ಕದಲ್ಲಿರತಕ್ಕಂತಹ...

ಅಧ್ಯಕ್ಷರು:- ಪ್ರಶ್ನೆಗಳು ಬೇಡ. ನೀವು ಆಮೇಲೆ ಅದನ್ನು ಮಾಡಿಕೊಳ್ಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ನೋಡಿ ನನ್ನ ಹತ್ತಿರ ದಾಖಲೆ ಇದೆ. ದಯವಿಟ್ಟು ಕುಳಿತುಕೊಳ್ಳಿ ಶ್ರೀರಾಮರೆಡ್ಡಿಯವರೇ, ನಾನು ಮಾತನಾಡುತ್ತೇನೆ. ಅಲ್ಲಿ ಪಕ್ಕದಲ್ಲಿರತಕ್ಕಂತಹ ಜಮೀನಿನ ವಿವಾದದಲ್ಲಿ ಎರಡು ಹರಿಜನ ಗುಂಪಿನವರ ನಡುವೆಯಾಗಿರತಕ್ಕಂತಹ ಸಮಸ್ಯೆ. ಸಿ.ಪಿ.ಎಂ.ಪಾರ್ಟಿಯ ಕಾರ್ಯದರ್ಶಿಯವರು ಇವತ್ತು ಬೆಳಿಗ್ಗೆ ನನ್ನನ್ನು ಭೇಟಿ ಮಾಡಿದ್ದರು. ಎಲ್ಲಾ ವಿವರಗಳನ್ನು ಸಹಿತ ನಾನು ತೆಗೆದುಕೊಂಡು ಆ ವಿಚಾರದಲ್ಲಿ ವಿಚಾರಣೆಯನ್ನು ನಡೆಸಲಿಕ್ಕೆ ಡಿ.ಐ.ಜಿ.ಯವರಿಗೆ ಖುದ್ದಾಗಿ ಸೂಚನೆಯನ್ನು ನಾನು ಕೊಟ್ಟಿದ್ದೇನೆ. ವಿಚಾರಣಾ ವರದಿ ಬಂದ ಮೇಲೆ ಗೌರವಾನ್ವಿತ ಸದಸ್ಯರಿಗೆ ಅದನ್ನು ತಿಳಿಸುತ್ತೇನೆ.

(3) ಡಾ.ಶಿವರಾಮ ಕಾರಂತರ 'ಓದುವ ಆಟ' ಪುಸ್ತಕವನ್ನು ಹಿಂದಕ್ಕೆ ಪಡೆದಿರುವುದು.

ಡಾ|| ಜೀವರಾಜ ಆಳ್ವ:- ಮಾನ್ಯ ಅಧ್ಯಕ್ಷರೇ, ಲೋಕ ನಾಯಕರಾದ ಜಯಪ್ರಕಾಶ ನಾರಾಯಣ್‌ರವರು ಹುಟ್ಟುಹಾಕಿದಂತಹ ಜನತಾ ಪಕ್ಷ, ಜನತಾ ದಳ ಸರ್ಕಾರ ಅಧಿಕಾರದಲ್ಲಿದೆ. ಮಹಾಚೈತ್ರವಾಯಿತು ಸುಮ್ಮನೆ ಕುಳಿತೆವು. ನನಗೆ ನೋವು ಏನು ಎಂದು ಹೇಳಿದರೆ, ಅತ್ಯಂತ ದೊಡ್ಡ ವಿಚಾರವಾದಿ, ಸಾಂಸ್ಕೃತಿಕ ನೆಲೆಗಟ್ಟಿನ ಬಗ್ಗೆ ಅತ್ಯಂತ ಕಟುವಾದಂತಹ ಅಭಿಪ್ರಾಯ ಇರುವಂತಹ ಶ್ರೀ ಜೆ.ಹೆಚ್.ಪಟೇಲರು, ಉಪ ಮುಖ್ಯಮಂತ್ರಿ, ವೈಜನಾಥ್ ಪಾಟೀಲರವರು, ಲಲಿತಾನಾಯಕ್, ನಾಣಯ್ಯನವರು, ಮಂಜುನಾಥರವರು,